# <u>ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ</u>

ಸಿ.ಸಿ. ನಂಃ 1709 – **2024**

| **ಪಿರ್ಯಾದುದಾರರುಃ** | | **ಆರೋಪಿತರುಃ** |
|---|---|---|
| ಸಾಗರ ಪೇಟೆ ಪೋಲಿಸ್ ಠಾಣೆ | ವಿರುದ್ಧ | ಕುಮಾರ ಎಸ್ ಎಮ್ ಮತ್ತು ಇನ್ನೊಬ್ಬರು |

## <u>ದೋಷಾರೋಪಣೆ</u>

ಶ್ರೀ ಮಾದೇಶ ಎಂ.ವಿ, ಬಿ.ಎ,ಎಲ್.ಎಲ್.ಬಿ, ಸಾಗರದ ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಅಂದರೆ:

1. ಕುಮಾರ ಎಸ್ ಎಮ್ ಬಿನ್ ಮಲ್ಲಣ್ಣ
   ವಯಸ್ಸು ಸುಮಾರು 78 ವರ್ಷ,

2. ಮಾಲತೇಶ ಬಿನ್ ಕುಮಾರ ಎಸ್ ಎಮ್
   ವಯಸ್ಸು ಸುಮಾರು 45 ವರ್ಷ,

   ಇಬ್ಬರ ವಾಸಃ ಕೆನರಾ ಬ್ಯಾಂಕ್ ಎದುರುಗಡೆ,
   ಚೌಸಮ್ಮ ಬೀಡಿ, ಸಾಗರ ಟೌನ್,
   ಶಿವಮೊಗ್ಗ.

**ಈ ಕೆಳಕಂಡಂತೆ ಆರೋಪ ಹೊರಿಸುತ್ತೇನೆಃ**

ಮೊದಲನೇಯದಾಗಿ, ದಿನಾಂಕಃ 31-12-2023 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಆರೋಪಿತರಾದ ನೀವು ಚಾಸಾ.1 ನೇ ಯವರಿಗೆ ಸೇರಿದ ಸಾಗರ ಟೌನ್ ಕೊತ್ವಾಲಕಟ್ಟಿ ಸರ್ವೇ ನಂ.5/4 ರಲ್ಲಿ ಕಂಡ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **447** ರ ಸಹವಾಚಕ

ಕಲಂ **34** ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ.1 ನೇ ಯವರನ್ನು ಅಡ್ಡಗಟ್ಟಿ ಅವಾಚ್ಯವಾಗಿ ಬೈದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **504** ರ ಸಹವಾಚಕ ಕಲಂ **34** ರಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ.1 ನೇ ಯವರ ಕೊರಳ ಪಟ್ಟಿ ಹಿಡಿದು, ಎಳೆದಾಡಿ ಕೈಗಳಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **323** ರ ಸಹವಾಚಕ ಕಲಂ **34** ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಕೊನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ.1 ರವರಿಗೆ ಈ ದಿನ ನಿನ್ನನ್ನು ಇಲ್ಲೆ ಕೊಲೆ ಮಾಡಿಯೇ ತೀರುತ್ತೇವೆ ಎಂದು ಜೀವ ಬೆದರಿಕೆ ಹಾಕಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **506** ರ ಸಹವಾಚಕ ಕಲಂ 34 ರಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಆದ್ದರಿಂದ ನಿಮ್ಮನ್ನು ವಿಚಾರಣೆಗೊಳಪಡಿಸಿ ಮುಂದಿನ ಕೇಸು ನಡೆಸಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕ

(**ಮಾದೇಶ ಎಂ ವಿ**)
ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.

# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಸಾಗರ.

ಸಿ.ಸಿ. ಸಂ. **1709/2024**

ಪಿರ್ಯಾದಿಃ ವಿಃ ಆರೋಪಿಃ

ಸಾಗರ ಟೌನ್ ಪೋಲಿಸ್ ಠಾಣೆ ವಿರುದ್ಧ ಮಾಲತೇಶ ಬಿನ್ ಕುಮಾರ ಎಸ್ ಎಮ್

<u>ಆರೋಪಿಯ ಹೇಳಿಕೆ</u>

ಪ್ರಶ್ನೆ1. ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?

ಉತ್ತರಃ

ಪ್ರಶ್ನೆ2. ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?

ಉತ್ತರಃ

*(ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಈ ಆಪಾದನೆಯನ್ನು ಓದಿ ಹೇಳಿ ಆತನು ಹೇಳಿದಂತೆ ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ)*

ದಿನಾಂಕಃ

ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ.